ನಿಮ್ಮೊಡನೆ

# ಮೌಲ್ಯವ್ಯವಸ್ಥೆಗೆ ಆಳಿಗೊಂದು ಮಾತಿನ ಕಲ್ಲು

ಕೊಳೆಯಾದ ಬಟ್ಟೆಯನ್ನು ತೊಟ್ಟಿರುವ, ಕಣ್ಣುಗಳಲ್ಲಿ ದೈನ್ಯತೆ ತುಂಬಿರುವ, ಒಡೆದ ಹಿಮ್ಮಡಿಗಳ ವ್ಯಕ್ತಿಯ ಹೊರತಾದ ರೈತನ ಚಿತ್ರವನ್ನು ಒಪ್ಪಿಕೊಳ್ಳಲು ಭಾರತೀಯ ರಾಜಕಾರಣಿಗಳ ಕಣ್ಣುಗಳು ನಿರಾಕರಿಸುತ್ತಿರಬೇಕು. ತುಂಬಾ ಜತನದಿಂದ ಪೋಷಿಸಿಕೊಂಡು ಬಂದಿರುವ ದೀನ ರೈತನ ಬಿಂಬದಲ್ಲಿ ವ್ಯತ್ಯಾಸವಾದರೆ, ಅದನ್ನು ಅರಗಿಸಿಕೊಳ್ಳುವುದು ಕಷ್ಟವಾಗುವುದು ಸಹಜ.



ಈಶ್ವರ್

ಅಮ್ಮ, ಅಪ್ಪ, ಗುರು ಹಾಗೂ ವೈದ್ಯರನ್ನು 'ಭಾರತೀಯ ಸಂಸ್ಕೃತಿ' ದೈವದ ರೂಪದಲ್ಲಿ ಕಾಣುತ್ತದೆ. ಈ ಸಾಲಿಗೆ ರೈತನನ್ನೂ ಸೇರಿಸಬೇಕು. ಪ್ರತಿಯೊಬ್ಬ ಮನುಷ್ಯನೂ ಗೌರವಿಸಬೇಕಾದ, ಋಣಿಯಾಗಿರಬೇಕಾದ ವ್ಯಕ್ತಿ ರೈತ. ಕೃಷಿಯನ್ನು ನಿರ್ಲಕ್ಷಿಸಿದರೆ ಈ ಜಗತ್ತಿನಲ್ಲಿ ಉಳಿಯುವುದೇನೂ ಇಲ್ಲ. ಈ ಸತ್ಯವನ್ನೇ ಕುವೆಂಪು ಅವರು, 'ನೇಗಿಲ ಕುಲದೊಳಗಡಗಿದೆ ಕರ್ಮ, ನೇಗಿಲ ಮೇಲೆ ನಿಂತಿದೆ ಧರ್ಮ' ಎಂದು ಹೇಳಿರುವುದು. ರೈತನ ಬಗ್ಗೆ ನಮ್ಮ ಪರಂಪರೆ ಯಾವಾಗಲೂ ಕೃತಜ್ಞತೆಯಿಂದ ನಡೆದುಕೊಂಡಿದೆ; 'ಅನ್ನದಾತ' ಎಂದು ಗೌರವಿಸಿದೆ. ವರ್ತಮಾನದ ವಿದ್ಯಮಾನಗಳನ್ನು ನೋಡಿದರೆ, ರೈತನ ಕುರಿತ ನಮ್ಮ ನೋಟಗಳಲ್ಲಿ ಐಬು ಕಾಣಿಸುತ್ತಿದೆ. ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸಿದ ಪ್ರತಿಭಟನೆಯ ಬಗ್ಗೆ ನಡೆದ ಚರ್ಚೆಗಳಲ್ಲಿ ಈ ಐಬು ಸ್ಪಷ್ಟವಾಗಿ ಗೋಚರವಾಯಿತು.

ಪ್ರತಿಭಟನೆಯ ಬಗ್ಗೆ ತಕರಾರು ಎತ್ತಿದ ಕೆಲವರಿಗೆ ರೈತರಿಗೆ ದೊರೆಯುವ ಸಬ್ಸಿಡಿ ದೇಶದ ಬಹು ದೊಡ್ಡ ಸಮಸ್ಯೆಯಾಗಿ ಕಾಣಿಸಿದೆ. ದೊಡ್ಡ ಮೊತ್ತದ ತೆರಿಗೆ ಕಟ್ಟುವ ಸಾಫ್ಟ್‌ವೇರ್ ಎಂಜಿನಿಯರ್ ಜೊತೆಗೆ ಹಲವು ಸಬ್ಸಿಡಿ ಪಡೆಯುವ ರೈತನನ್ನು ಒಟ್ಟಿಗಿಟ್ಟು ನೋಡುವ ಮಾತುಕತೆಗಳು, 'ರೈತನ ಕೊಡುಗೆಯದೇನು ಹೆಚ್ಚುಗಾರಿಕೆ?' ಎನ್ನುವ ಅರ್ಥವನ್ನು ಧ್ವನಿಸುವಂತಿವೆ. ರೈತರ ಪ್ರತಿಭಟನೆಯನ್ನು ಶಂಕಿಸಿ, ಅದರ ಹಿಂದೆ ರಾಜಕೀಯ ಪ್ರೇರಣೆಗಳನ್ನು ಕಂಡವರೂ ಇದ್ದಾರೆ. ಚರ್ಚೆಯ ಸಂದರ್ಭದಲ್ಲಿ ಇಂಥ ಅಭಿಪ್ರಾಯಗಳೆಲ್ಲವೂ ಸಾಮಾನ್ಯವೇ. ಆದರೆ, ಇಂಥ ವಾದಗಳ ಮೂಲಕ ಸಮಾಜ ಈವರೆಗೆ ನೆಚ್ಚಿಕೊಂಡು ಬಂದಿದ್ದ ಮೌಲ್ಯವ್ಯವಸ್ಥೆಯೊಂದನ್ನು ನಾವು ಶಿಥಿಲಗೊಳಿಸುತ್ತಿದ್ದೇವೆ ಎನ್ನುವುದನ್ನು ಮರೆಯಬಾರದು. ಯಾವುದು ಆ ಮೌಲ್ಯ? ಅದು, ವ್ಯಕ್ತಿಯ ಉಪಯುಕ್ತತೆಯನ್ನು ಮಾಡುವ ಕರ್ಮದ ಮೇಲೆ ಗುರ್ತಿಸುವುದು; ತಿನ್ನುವ ಅನ್ನ ಎಲ್ಲಕ್ಕಿಂತಲೂ ಶ್ರೇಷ್ಠವಾದುದು ಎಂದು ಭಾವಿಸುವುದು. ಹೊಲದಲ್ಲಿ ಅರೆಬೆತ್ತಲೆಯಾಗಿ ದುಡಿಯುವ ರೈತನನ್ನು 'ಕೋಡ್'ಗಳನ್ನು ಕೋಡುಗಳಾಗಿ ಧರಿಸಿದ ಸಾಫ್ಟ್‌ವೇರಿಗನೊಂದಿಗೆ ಹೋಲಿಸಿದಾಗ ಇಂಥ ನಂಬಿಕೆಗಳು ಅಲ್ಲಾಡತೊಡಗುತ್ತವೆ. ಹಣದ ಮೂಲಕ ಸಮಾಜವನ್ನು ಗ್ರಹಿಸತೊಡಗಿದಾಗ, ಆ ಸಮಾಜಕ್ಕಿರುವ ನೈತಿಕ ಆಯಾಮ ಮರೆಯಾಗತೊಡಗುತ್ತದೆ.

ಜನಸಾಮಾನ್ಯರ ಚರ್ಚೆಯ ಮಾತಿರಲಿ. ಕೇಂದ್ರ ಸಚಿವರೊಬ್ಬರ ಕಣ್ಣಿಗೆ ಪ್ರತಿಭಟನೆಯಲ್ಲಿ ತೊಡಗಿರುವ ಬಹುತೇಕರು ರೈತರಂತೆ ಕಾಣಿಸಲಿಲ್ಲ. ಯಾಕೆ ಹೀಗೆ? ಯಾಕೆಂದರೆ, ಕೆಲವು ರೈತರು ಜೀನ್ಸ್ ತೊಟ್ಟಿದ್ದರು. ಅವರ ಕೈಗಳಲ್ಲಿ ಸ್ಮಾರ್ಟ್ ಫೋನ್‌ಗಳಿದ್ದವು. ಅವರು ಕಾರುಗಳಲ್ಲಿ ಓಡಾಡುತ್ತಿದ್ದರು. ಇಂಥವರನ್ನು ರೈತರೆಂದು ಒಪ್ಪಿಕೊಳ್ಳಲು ಸಚಿವರಿಗೆ ಕಷ್ಟವಾಗಿರಬೇಕು. ಭಾರತೀಯ ರಾಜಕಾರಣಿಗಳ ಕಣ್ಣುಗಳು – ಕೊಳೆಯಾದ ಬಟ್ಟೆಯನ್ನು ತೊಟ್ಟಿರುವ, ಕಣ್ಣುಗಳಲ್ಲಿ ದೈನ್ಯತೆ ತುಂಬಿರುವ, ಒಡೆದ ಹಿಮ್ಮಡಿಗಳ ವ್ಯಕ್ತಿಯ ಹೊರತಾದ ರೈತನ ಚಿತ್ರವನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿರಬೇಕು. ತುಂಬಾ ಜತನದಿಂದ ಪೋಷಿಸಿಕೊಂಡು ಬಂದಿರುವ ದೀನ ರೈತನ ಬಿಂಬದಲ್ಲಿ ವ್ಯತ್ಯಾಸವಾದರೆ, ಅದನ್ನು ಅರಗಿಸಿಕೊಳ್ಳುವುದು ಕೃಷಿ ಸಚಿವರಿಗೆ ಅಥವಾ ಕಾರ್ಪೊರೆಟ್ ಜಗತ್ತಿನ ಕೆಲವರಿಗೆ ಕಷ್ಟವಾಗುವುದು ಸಹಜ.

ರಾಜ್ಯದ ಪರಿಸ್ಥಿತಿ ನೋಡಿ. ನಮ್ಮ ಕೃಷಿ ಸಚಿವರು, ಆತ್ಮಹತ್ಯೆ ಮಾಡಿಕೊಳ್ಳುವ ರೈತರನ್ನು ಹೇಡಿಗಳೆಂದು ಕರೆದಿದ್ದಾರೆ. ನಿಜ, ಆತ್ಮಹತ್ಯೆ ಮಾಡಿಕೊಳ್ಳುವುದು ಹೇಡಿತನದ ಲಕ್ಷಣವೇ. ಆದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿರುವ ಪರಿಸ್ಥಿತಿ ಯಾವುದು? ರೈತರ ಆತ್ಮಹತ್ಯೆ ತಡೆಗಟ್ಟಲು ಸರ್ಕಾರ ಏನು ಮಾಡಿದೆ? ಈವರೆಗಿನ ಸರ್ಕಾರಗಳೆಲ್ಲ 'ಕೃಷಿ ಮಂತ್ರ' ಜಪಿಸುತ್ತಿದ್ದರೂ ರೈತಾಪಿ ವರ್ಗ ಸಂಕಷ್ಟದಲ್ಲೇ ಇರುವುದು ಏಕೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಪರಿಸ್ಥಿತಿ ಸುಧಾರಿಸಬೇಕಾದ ಸಚಿವರು, ರೈತರನ್ನು ಹೇಡಿಗಳೆಂದು ಕರೆಯುವ ಮೂಲಕ ಸಮಸ್ಯೆಯನ್ನು ಸರಳೀಕರಿಸಿದರು. ಭರವಸೆಗಳೆಲ್ಲ ಹುಸಿಯಾದ ಸಂದರ್ಭದಲ್ಲಿನ ರೈತರ ಅಸಹಾಯಕತೆಯನ್ನು ಹೇಡಿತನವೆಂದು ಕರೆದ ಸಚಿವರು ಮರೆತ ವಿಷಯವೊಂದಿದೆ. ಒಳ್ಳೆಯ ವ್ಯಾಪಾರ ಆಗುವ ಕಡೆಗೆ ಗುಳೆ ಹೋಗುವ ಅವಕಾಶ ರಾಜಕಾರಣದಲ್ಲಿದೆಯೇ ಹೊರತು, ಕೃಷಿಕ್ಷೇತ್ರದಲ್ಲಿಲ್ಲ ಎನ್ನುವ ಸಂಗತಿಯದು. ರಾಜಕಾರಣದ ಹುಲ್ಲುಗಾವಲಲ್ಲಿ ಹಣದ ಬೆಳೆಯಾದರೆ, ಹೊಲಗಳಲ್ಲಿ ರೈತರು ಅನ್ನ ಉತ್ಪಾದಿಸಲಷ್ಟೇ ಸಾಧ್ಯ.

ಮಣ್ಣಿನಲ್ಲಿ ಈವರೆಗೆ ನಮಗೆ ಅನ್ನ ಕಾಣುತ್ತಿತ್ತು. ಈಗ ಹಣ ಕಾಣತೊಡಗಿದೆ. ಈ ಬದಲಾವಣೆ, 'ಬೆವರಿನ ವರ್ಗ'ದ ಬಗೆಗಿನ ಉಡಾಫೆಯ ಮಾತುಗಳಿಗೆ ಕಾರಣಗಳಲ್ಲೊಂದಾಗಿದೆ. ರೈತರ ಸಂಕಷ್ಟಗಳಿಗೆ ಸ್ಪಂದಿಸುವುದು ನಮಗೆ ಸಾಧ್ಯವಾಗದಿರಬಹುದು. ಆದರೆ, ಅವರ ಕೊಡುಗೆಯ ಬಗ್ಗೆ ಬಿಡುಬೀಸಾಗಿ ಮಾತನಾಡುವುದು ಅಮಾನವೀಯ. ಹೀಗೆ ಮಾತನಾಡುವ ಚಾಳಿಯನ್ನು ಕುರಿತೇ, 'ಆಚಾರವಿಲ್ಲದ ನಾಲಿಗೆ, ನೀಚಬುದ್ಧಿಯ ಬಿಡು ನಾಲಿಗೆ' ಎಂದು ಪುರಂದರದಾಸರು ಹಾಡಿರಬೇಕು.

■ ರಘುನಾಥ ಚ.ಹ.